ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ದಿನಾಂಕ 19ನೇ ಆಗಸ್ಟ್ 1995ರವರೆಗೆ 175 ತಾಲ್ಲೂಕುಗಳ ಪೈಕಿ 17 ಜಿಲ್ಲೆಗಳಲ್ಲಿನ 70 ತಾಲ್ಲೂಕುಗಳಲ್ಲಿ ಸರಾಸರಿಗಿಂತ ಕಡಿಮೆ ಮಳೆ ಬಿದ್ದಿರುತ್ತದೆ (ದಕ್ಷಿಣ ಕನ್ನಡ, ಬೀದರ್ ಮತ್ತು ತುಮಕೂರು ಜಿಲ್ಲೆಗಳನ್ನು ಹೊರತುಪಡಿಸಿ).

ಆ) ಇಲ್ಲ - ಬಿತ್ತನೆ ಕಾರ್ಯವು ಇನ್ನೂ ನಡೆಯುತ್ತಿದೆ.

ಇ) ಮಳವಳ್ಳಿ ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ಕಡಿಮೆ ಮಳೆ ಬಿದ್ದಿರುತ್ತದೆ. ಬಿತ್ತನೆ ಕಾರ್ಯವು ಇನ್ನೂ ನಡೆಯುತ್ತಿರುವುದರಿಂದ, ಈ ಹಂತದಲ್ಲಿ ನಷ್ಟದ ಪ್ರಮಾಣವನ್ನು ಅಂದಾಜು ಮಾಡಲಾಗುವುದಿಲ್ಲ.

ಈ) ಅವಶ್ಯವಿರುವೆಡೆಗಳಲೆಲ್ಲಾ ಕುಡಿಯುವ ನೀರಿನ, ಮೇವಿನ ಮತ್ತು ಅವಶ್ಯವಿರುವ ಕೃಷಿ ಕಾರ್ಮಿಕರು ಮತ್ತು ಸಣ್ಣ, ಅತಿ ಸಣ್ಣ ರೈತರಿಗೆ, ಉದ್ಯೋಗದ ತೊಂದರೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ.

ವಿವರಗಳು ಈ ಕೆಳಕಂಡಂತಿವೆ. *(ಹೆಕ್ಟೇರ್‌ಗಳಲ್ಲಿ)*

1.	ಕೊಡಗು	5000	11.	ರಾಯಚೂರು	ಇಲ್ಲ
2.	ಹಾಸನ	ಇಲ್ಲ	12.	ತುಮಕೂರು	ಇಲ್ಲ
3.	ಮಂಡ್ಯ	151080	13.	ಬಿಂಗ. ನ)	ಇಲ್ಲ
4.	ಧಾರವಾಡ	ಇಲ್ಲ	14.	ಬಿಂಗ (ಗ್ರಾ)	ಇಲ್ಲ
5.	ಚಿಕ್ಕಮಗಳೂರು	ಇಲ್ಲ	15.	ದ.ಕನ್ನಡ	ಇಲ್ಲ
6.	ಕೋಲಾರ	ಇಲ್ಲ	16.	ಬೆಳಗಾಂ	ಇಲ್ಲ
7.	ಚಿತ್ರದುರ್ಗ	ಇಲ್ಲ	17.	ಉ.ಕನ್ನಡ	ಇಲ್ಲ
8.	ಬಳ್ಳಾರಿ	95615	18.	ಬಿಜಾಪುರ	ಇಲ್ಲ
9.	ಬೀದರ್	ಇಲ್ಲ	19.	ಮೈಸೂರು	ಇಲ್ಲ
10.	ಗುಲ್ಬರ್ಗಾ	ಇಲ್ಲ	20.	ಶಿವಮೊಗ್ಗ	ಇಲ್ಲ

ಗ್ರಾಮಾಂತರ ಪ್ರದೇಶಕ್ಕೆ ರಿಂಗ್ ರೋಡ್ ಬಸ್‌ವ್ಯವಸ್ಥೆ

1388ಎ - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣ ಪ್ರದೇಶದಂತೆ ಗ್ರಾಮೀಣ ಪ್ರದೇಶದ ತಾಲ್ಲೂಕು ಕೇಂದ್ರದಿಂದ "ರಿಂಗ್ ರೌಂಡ್" ರೀತಿಯಲ್ಲಿ ಬಸ್ ಬಿಡಲು ಸರ್ಕಾರ ಯೋಜನೆ ಮಾಡಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಸಧ್ಯದಲ್ಲಿ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಕೃಷಿ ಬೆಲೆ ನಿಗದಿ ಮಾಡುವ ಬಗ್ಗೆ

1351 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಬೆಲೆಯ ನಿಗಧಿತ ನೀತಿ ಬಗ್ಗೆ ರೈತರ ಸಮಿತಿ ಮಾಡಲು (ಆಯಾಯ ಬೆಳೆಗಳಿಗೆ ಸಂಬಂಧಪಟ್ಟಂತೆ) ಸರ್ಕಾರ ನಿಲುವು ತೆಗೆದುಕೊಳ್ಳದಿರಲು ಕಾರಣಗಳೇನು;

ಆ) ಸದರಿ ಸಮಿತಿಯನ್ನು ಎಂದು ರಚಿಸಲಾಗುವುದು?

ಶ್ರೀ. ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಕೃಷಿ ಬೆಳೆಗಳಿಗೆ ಬೆಂಬಲ ಬೆಲೆಗಳನ್ನು ನಿಗಧಿಪಡಿಸುವುದು ಕೇಂದ್ರ ಸರ್ಕಾರದ ಕಾರ್ಯನೀತಿಗೆ ಒಳಪಟ್ಟಿರುತ್ತದೆ. ಆದುದರಿಂದ ರಾಜ್ಯ ಸರ್ಕಾರವು ಕೇವಲ ಬೆಂಬಲ ಬೆಲೆಗಳನ್ನು ಮಾತ್ರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

ಆ) ಬೆಂಬಲ ಬೆಲೆಗಳನ್ನು ನಿಗಧಿಪಡಿಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ರಾಜ್ಯ ಸರ್ಕಾರವು ಸಮಿತಿಯನ್ನು ಇದಕ್ಕೆ ಪ್ರತ್ಯೇಕವಾಗಿ ರಚಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಕಬ್ಬಿನ ಬೆಲೆ ನಿಗಧಿಪಡಿಸಲು ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ಇರುತ್ತದೆ.

ರಾಜ್ಯದ ಬಾಲ ಕಾರ್ಮಿಕರ ಕುರಿತು

1009 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು;

ಆ) ಬಾಲ ಕಾರ್ಮಿಕರಿಂದ ಕೆಲಸ ಮಾಡಿಸುವುದು ಕಾನೂನು ಬಾಹಿರವಲ್ಲವೇ? ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಇ) ಬಾಲ ಕಾರ್ಮಿಕರ ಕಲ್ಯಾಣದ ಬಗ್ಗೆ ಸರ್ಕಾರ ಗೊತ್ತುಪಡಿಸಿರುವ ಕಾರ್ಯ ಕ್ರಮಗಳೇನು;

ಈ) ಕಾನೂನು ಬಾಹಿರವಾಗಿ ಬಾಲ ಕಾರ್ಮಿಕರನ್ನು ದುಡಿಸುವ ಸಂಸ್ಥೆಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 1981ರ ಜನಗತಿಯ ಪ್ರಕಾರ 11.17 ಲಕ್ಷ ಬಾಲ ಕಾರ್ಮಿಕರು ಇದ್ದಾರೆ.

1991ರ ಜನಗಣತಿ ಸರಿಖ್ಯೆ ಇನ್ನೂ ಪ್ರಕಟವಾಗಿಲ್ಲ. ಈ ಸಂಖ್ಯೆಯು ಸುಮಾರು 13 ಲಕ್ಷಗಳಿರಬಹುದು.

ಆ) ಹೌದು.